ನಮ್ಮ ಉಲ್ಲೇಖ: ಎಮ್‌ಐ01/ಪ್ರೆಸ್05/11/14ವಿಎಸ್ ಡಿಸೆಂಬರ್ 05, 2014

# ಪತ್ರಿಕಾ ಪ್ರಕಟಣೆ

## ಸಾರ್ಕ್ ಸಮ್ಮೇಳನ 2014
## ಪುನರ್ವಸತೀಕರಣ ಚಿಕಿತ್ಸೆಯಲ್ಲಿನ ಉತ್ತಮ ಪದ್ಧತಿಗಳು
## ಡಿಸೆಂಬರ್ 10–12 ಡಿಸೆಂಬರ್: ಮೊಬಿಲಿಟಿ ಇಂಡಿಯಾ ಬೆಂಗಳೂರು

**ಜಾಗತಿಕ ಚಿತ್ರಣ:** ಜಗತ್ತಿನ ಜನಸಂಖ್ಯೆಯ ಶೇಕಡ 15 ರಷ್ಟು ಜನರು ಒಂದಲ್ಲ ಒಂದು ರೀತಿಯ ವೈಕಲ್ಯತೆಯನ್ನು ಹೊಂದಿದ್ದು ಇವರಲ್ಲಿ ಶೇಕಡ 2–4 ರಷ್ಟು ಜನರು ಕೆಲಸಕಾರ್ಯಗಳನ್ನು ಮಾಡುವಲ್ಲಿ ಗುರುತರವಾದ ಕಷ್ಟಗಳನ್ನು ಅನುಭವಿಸುತ್ತಿದ್ದಾರೆ. ಪ್ರಾಯೋಗಿಕ ಸಾಕ್ಷಿಗಳು ಸೂಚಿಸುವಂತೆ ಪ್ರಪಂಚದಾದ್ಯಂತ ಇರುವ ಅಂಗವಿಕಲರಲ್ಲಿ ಶೇಕಢ 80 ರಷ್ಟು ಜನರು ವಾಸಿಸುತ್ತಿರುವುದು ಆರೋಗ್ಯ ಹಾಗೂ ಪುನರ್ವಸತೀಕರಣ ಸೌಲಭ್ಯಗಳು ಲಭ್ಯವಿಲ್ಲದ, ಮಾನವ ಹಕ್ಕುಗಳ ಲಾಭ ಪಡೆಯಲು ಸಾಧ್ಯವಿಲ್ಲದಂಥ ಅಭಿವೃದ್ಧಿ ಹೊಂದುತ್ತಿರುವ ರಾಷ್ಟ್ರಗಳಲ್ಲೇ. ಜಗತ್ತಿನಲ್ಲಿರುವ ಅಂದಾಜು ಒಂದು ಬಿಲಿಯನ್ ಅಂಗವಿಕಲರಲ್ಲಿ ಬಹುತೇಕರಿಗೆ ಸರಿಯಾದ ವೈದ್ಯಕೀಯ ಸೇವೆ ಹಾಗೂ ಪುನರ್ವಸತೀಕರಣ ಸೌಲಭ್ಯಗಳು ಲಭ್ಯವಿಲ್ಲ. ಇಂಥ ಸೇವೆಗಳ ಅನುಪಸ್ಥಿತಿಯು ಅಂಗವಿಕಲರಿಗೆ ಮುಖ್ಯವಾಹಿನಿಯೊಂದಿಗೆ ಪೂರ್ಣವಾಗಿ ಬೆರೆಯಲು ಮತ್ತು ಜೀವನದ ಎಲ್ಲ ಕ್ಷೇತ್ರಗಳಲ್ಲಿಯೂ ಸಮರ್ಪಕವಾಗಿ ತೊಡಗಿಕೊಳ್ಳಲು ಅಸಾಧ್ಯವಾಗಿಸುವಂಥ ತೊಡಕುಗಳನ್ನು ಸೃಷ್ಟಿಸುತ್ತದೆ.

ಈ ಜನಸಂಖ್ಯೆಯ ಶೇಕಡ 0.5 ಜನರಿಗೆ ಪುನರ್ವಸತಿ ಸೇವೆಗಳ (ಚಲಿಸಲು ಸಹಕರಿಸುವ ಉಪಕರಣಗಳೂ ಸೇರಿದಂತೆ) ಅಗತ್ಯವಿದೆ. 60 ಮಿಲಿಯನ್ ಅಂಗವಿಕಲರಿರುವ ಭಾರತದಲ್ಲಿ ಪ್ರತಿ 25,000 ಅಂಗವಿಕಲರಿಗೆ ಒಬ್ಬರೇ ತರಬೇತಿ ಹೊಂದಿದ ಚಿಕಿತ್ಸಕರಿರುವುದು ಎಂದು ಅಂದಾಜಿಸಲಾಗಿದೆ. ಅಧಿಕೃತ ಅಂಗವೈಕಲ್ಯತೆಯ ಸೌಲಭ್ಯಗಳು ಮುಖ್ಯವಾಗಿ ವೈದ್ಯಕೀಯ ಪುನರ್ವಸತಿಗಷ್ಟೇ ಸೀಮಿತವಾಗಿವೆ. ವಿವಿಧ ವಲಯಗಳ ತರಬೇತಿ ಹೊಂದಿದ ಆರೋಗ್ಯ ಸಿಬ್ಬಂದಿಯ ಅದರಲ್ಲೂ ಪುನರ್ವಸತೀಕರಣದ ಸಿಬ್ಬಂದಿಯ ಸಾಮರ್ಥ್ಯ ಹೆಚ್ಚಿಸುವ ಮತ್ತು ಈ ಬೇಡಿಕೆಗಳನ್ನು ಪೂರೈಸುವ ಸಂಘಟನೆಗಳ ಸಾಮರ್ಥ್ಯವನ್ನು ಹೆಚ್ಚಿಸುವ ಅಗತ್ಯವಿದೆ. ವಿಶೇಷವಾಗಿ ಪುನರ್ವಸತಿ ಚಿಕಿತ್ಸೆಯ ಕ್ಷೇತ್ರದಲ್ಲಿ ಜ್ಞಾನ ಹಾಗೂ ಕೌಶಲ್ಯಗಳನ್ನು ಉನ್ನತೀಕರಣಗೊಳಿಸುವ ಬಗ್ಗೆ ಪ್ರಾಮುಖ್ಯತೆಯನ್ನು ನೀಡಲಾಗುತ್ತಿಲ್ಲ.

ಬೃಹತ್ ಜನಸಂಖ್ಯೆ, ಸಂಕಷ್ಟದಲ್ಲಿರುವ ಅರ್ಥವ್ಯವಸ್ಥೆ ಬಡತನ, ಅಲಭ್ಯ ಆರೋಗ್ಯಸೇವೆಗಳು ಮತ್ತು ಆಂತರಿಕ/ಬಾಹ್ಯ ಘರ್ಷಣೆಗಳು, ಈ ಸಾಮಾನ್ಯ ಸಮಸ್ಯೆಗಳನ್ನು ಬಹುತೇಕ ಎಲ್ಲ ಸಾರ್ಕ್ ರಾಷ್ಟ್ರಗಳೂ ಎದುರಿಸುತ್ತಿದ್ದು; ಇದರ ಪರಿಣಾಮವನ್ನು ಅನುಭವಿಸುವವರು ಸಾಮಾನ್ಯ ಪ್ರಜೆಗಳು, ಮುಖ್ಯವಾಗಿ ದೈಹಿಕ ದೌರ್ಬಲ್ಯ ಹಾಗೂ ವೈಕಲ್ಯತೆಯುಳ್ಳವರು.

ಪುನರ್ವಸತಿ ಚಿಕಿತ್ಸೆಯ ಕ್ಷೇತ್ರದಲ್ಲಿ ಸಿಬ್ಬಂದಿಗಳಿಗೆ ತರಬೇತಿಯನ್ನು ಕೊಡುವುದು ಎಮ್‌ಐನ ಮೂಲ ಧ್ಯೇಯಗಳಲ್ಲೊಂದು. ಹಲವು ವರ್ಷಗಳಿಂದಲೂ ಶಾಸನಕಾರರೊಡನೆ, ಆರೋಗ್ಯಸೇವಾ ಸಂಸ್ಥೆಗಳೊಡನೆ, ನಾಗರೀಕ ಸಾಮಾಜಿಕ ಸಂಘಟನೆಗಳೊಡನೆ ಮತ್ತು ಅಕಾಡೆಮಿ ಮತ್ತು ಪುನರ್ವಸತಿ ಚಿಕಿತ್ಸಕರೊಂದಿಗೆ ಎಮ್‌ಐ ಕೈ ಜೋಡಿಸಿ ಮಾನವ ಸಾಮರ್ಥ್ಯ ಹೆಚ್ಚಿಸಲು ಪುನರ್ವಸತಿ ಸೌಲಭ್ಯಗಳನ್ನು ಸಮರ್ಪಕವಾಗಿ ತಲುಪಿಸಲು ಕೆಲಸ ಮಾಡುತ್ತ ಬಂದಿದೆ. ಎಂಐನ ಪ್ರೊಸ್ಥೆಟಿಕ್ಸ್ ಹಾಗೂ ಆರ್ಥೋಟಿಕ್ಸ್ ಟ್ರೈನಿಂಗ್ ಹಾಗೂ ರಿಹ್ಯಾಬಿಲಿಟೇಶನ್ ಥೆರಪಿ ಕೋರ್ಸಿನ ಟ್ರೈನೀಗಳಲ್ಲಿ ಶೇಕಡ 70 ಕ್ಕಿಂತ ಹೆಚ್ಚು ಜನರು ಸಾರ್ಕ್ ರಾಷ್ಟ್ರಗಳವರೇ ಆಗಿದ್ದಾರೆ. ಈ ಪ್ರದೇಶಗಳ ಹಲವಾರು ಪಿ&ಓ ಗಳಿಗೆ, ಫಿಸಿಯೋಥೆರಪಿಸ್ಟ್‌ಗಳಿಗೆ, ಸಿಬಿಆರ್ ಮತ್ತು ಆಡಳಿತ ಸಿಬ್ಬಂದಿಗಳಿಗೆ ಎಮ್‌ಐ ಹಲವು ಹಂತಗಳಲ್ಲಿ ತರಬೇತಿ ಹಾಗೂ ಕ್ಷೇತ್ರ ಪರಿಚಯವನ್ನು ನೀಡಿದೆ (ಸರ್ಕಾರಿ ಹಾಗೂ ಸರ್ಕಾರೇತರ ಸಂಸ್ಥೆಗಳ ಸಿಬ್ಬಂದಿಗೆ).

**ಮೊಬಿಲಿಟಿ ಇಂಡಿಯಾ ಸಂಸ್ಥೆಯು ಬೆಂಗಳೂರಿನ ತನ್ನ ಪುನರ್ವಸತೀಕರಣ ಸಂಶೋಧನೆ ಹಾಗೂ ತರಬೇತಿ ಕೇಂದ್ರದಲ್ಲಿ 2014 ಡಿಸೆಂಬರ್ 10–12 ರವರೆಗೆ "ಸಮರ್ಪಕ ಹಾಗೂ ಸಶಕ್ತೀಕರಣದ ಭವಿಷ್ಯದೆಡೆಗೆ– ಪುನರ್ವಸತೀಕರಣ ಚಿಕಿತ್ಸೆಯಲ್ಲಿನ ಉತ್ತಮ ಪದ್ಧತಿಗಳು" ಎಂಬ ವಿಷಯದ ಬಗ್ಗೆ ಸಾರ್ಕ್ ಸಮ್ಮೇಳನವನ್ನು ಆಯೋಜಿಸಿದೆ.**

ಉದ್ದೇಶಿತ ಸಮ್ಮೇಳನವು ಭಾರತ ಹಾಗೂ ಇತರ ಸಾರ್ಕ್ ರಾಷ್ಟ್ರಗಳಲ್ಲಿನ (ಅಫ್ಘಾನಿಸ್ತಾನ, ಬಾಂಗ್ಲಾದೇಶ, ಭೂತಾನ್, ಮಾಲ್ಡೀವ್ಸ್, ನೇಪಾಳ, ಪಾಕಿಸ್ತಾನ ಮತ್ತು ಶ್ರೀಲಂಕಾ) ಫಿಸಿಯೋಥೆರಪಿಸ್ಟ್‌ಗಳು, ಆಕ್ಯುಪೇಶನಲ್ ಥೆರಪಿಸ್ಟ್‌ಗಳು, ಥೆರಪಿ ಅಸಿಸ್ಟೆಂಟ್‌ಗಳು, ಪ್ರೊಸ್ಥೆಟಿಸ್ಟ್ಸ್ ಮತ್ತು ಆರ್ಥೋಟಿಸ್ಟ್ಸ್, ಮೆಡಿಕಲ್ ಪ್ರಾಕ್ಟೀಶನರ್ಸ್, ಸಿಬಿಆರ್ ಪ್ರೊಫೆಶನಲ್ಸ್ ಮತ್ತು ಶಾಸನಕಾರರನ್ನು ಒಂದೆಡೆ ಸಂಘಟಿಸುವತ್ತ ಪ್ರಥಮ ಹೆಜ್ಜೆಯಾಗಿದೆ. ಇದರ ಉದ್ದೇಶವೆಂದರೆ ಈ ಕ್ಷೇತ್ರದಲ್ಲಿನ ಸಂಚಿತ ಜ್ಞಾನವನ್ನು ವಿಸ್ತರಿಸುವುದು ಮತ್ತು ಸಂಘಟಿತ ಪ್ರಯತ್ನದಿಂದ ಹೊಸ ಪರಿಹಾರಗಳನ್ನು ಕಂಡುಕೊಳ್ಳುವುದು, ಹಾಗೂ ಸಂಪನ್ಮೂಲಗಳ ಸಂಪರ್ಕಜಾಲವನ್ನು ಬೆಸೆಯುವುದು.

ಈ ಸಮ್ಮೇಳನದಲ್ಲಿ ಭಾಗವಹಿಸುವವರು ಮತ್ತು ಅವರು ಪ್ರತಿನಿಧಿಸುವ ಸಂಸ್ಥೆಗಳು ಪ್ರಮುಖ ಹಾಗೂ ಕಾರ್ಯಸಾಧ್ಯವಾದ ವಿಚಾರಗಳ ಬಗ್ಗೆ ಮತ್ತು ಪುನರ್ವಸತಿ ಚಿಕಿತ್ಸೆಯಲ್ಲಿನ ಹೊಸ ಸಂಪ್ರದಾಯಗಳ (ಉತ್ತಮ ಪದ್ಧತಿಗಳು) ಬಗ್ಗೆ ಪರಿಚಯ ಪಡೆಯುತ್ತಾರೆ. ಇದರಿಂದ ಉತ್ತಮ ಗುಣಮಟ್ಟದ ಸೇವೆಯು ಲಭ್ಯವಾಗಿ ಬಡವರು ಹಾಗೂ ಮುಖ್ಯವಾಹಿನಿಯಿಂದ ದೂರ ಉಳಿದಿರುವ ಅಂಗವಿಕಲರ ಸಮಾನ ಹಾಗೂ ಸಮರ್ಪಕ ಏಳ್ಗೆಯು ಸಾಧ್ಯವಿದೆ.

ಈ ಸಮ್ಮೇಳನವು ಹಲವಾರು ಜ್ಞಾನಶಾಖೆಗಳಲ್ಲಿನ ಪರಿಣಿತರನ್ನು ಒಂದೇ ವೇದಿಕೆಗೆ ಕರೆತಂದು ಅವರು ಪುನರ್ವಸತೀಕರಣ ಚಿಕಿತ್ಸೆ ಕ್ಷೇತ್ರದಲ್ಲಿನ ತಮ್ಮ ಅನುಭವಗಳನ್ನು ಹಂಚಿಕೊಳ್ಳಲು ಅವಕಾಶ ಕೊಡುತ್ತದೆ. ಸರ್ಕಾರದ ಶಾಸನಗಳು, ಅಂಗವಿಕಲರಿಗೆ ಸರ್ಕಾರಿ ಸೌಲಭ್ಯ ಹಾಗೂ ಸೇವೆಗಳ ಲಭ್ಯತೆ; ಪುನರ್ವಸತಿ ಚಿಕಿತ್ಸೆ ಸೌಲಭ್ಯ (ತಂತ್ರಜ್ಞಾನವೂ ಸೇರಿದಂತೆ) ಸಮುದಾಯಾಧಾರಿತ ಸೇವೆ, ಅಂಗವಿಕಲರ ಸಮಾಜೀಕರಣ, ಹೊಸ ಸಂಶೋಧನೆ ಹಾಗೂ ತಂತ್ರಜ್ಞಾನಗಳು, ಪ್ರಕರಣ ಅಧ್ಯಯನಗಳು, ಪುನರ್ವಸತಿ ಚಿಕಿತ್ಸೆ ಕ್ಷೇತ್ರದಲ್ಲಿ ಮಾನವ ಸಂಪನ್ಮೂಲದ ಅಭಿವೃದ್ಧಿ, ಇತ್ಯಾದಿ ವಿಷಯಗಳ ಬಗ್ಗೆ ಸಮ್ಮೇಳನದಲ್ಲಿ ಪ್ರಬಂಧ, ಚರ್ಚೆಗಳು ಇರುತ್ತವೆ. ಜೊತೆಗೆ ಈ ಸಮ್ಮೇಳನವು ಪ್ರಮುಖ ಪಾಲುದಾರರು, ಕ್ಷೇತ್ರದಲ್ಲಿ, ಕೆಲಸ ಮಾಡುತ್ತಿರುವ ಸರ್ಕಾರಿ/ಸರ್ಕಾರೇತರ ಸಂಘಟನೆಗಳು, ಆರೋಗ್ಯಸೇವಾ ಸಿಬ್ಬಂದಿ, ಪುನರ್ವಸತಿ ಸಂಸ್ಥೆಗಳು, ಪ್ರೋತ್ಸಾಹಕರು ಮುಂತಾದವರನ್ನೆಲ್ಲ ಒಂದೇ ವೇದಿಕೆಯ ಮೇಲೆ ಸೇರಿಸಿ ಪರಸ್ಪರ ಜ್ಞಾನ ಹಂಚಿಕೊಳ್ಳಲು ಅವಕಾಶ ಮಾಡಿಕೊಡುತ್ತದೆ. ಆದ್ದರಿಂದ ಇದು **ಸಮಗ್ರ ಹಾಗೂ ಸಶಕ್ತ ಭವಿಷ್ಯ** ನಿರ್ಮಾಣದತ್ತ ಮೊದಲ ಹೆಜ್ಜೆಯಾಗಿದೆ. ಮೂರು ದಿನಗಳ ಈ ಕಾರ್ಯಕ್ರಮದಲ್ಲಿ ಸುಮಾರು 70 ಪ್ರತಿನಿಧಿಗಳು ಭಾಗವಹಿಸಲಿದ್ದಾರೆ.

**ಭಾಷಣಕಾರರು:** ಡಾ. ಶ್ರೀಮತಿ ಎಲಿಜಬೆತ್ ಥಾಮಸ್, ಆಡಳಿತ ವಿಭಾಗದ ಸದಸ್ಯರು, ಮೊಬಿಲಿಟಿ ಇಂಡಿಯಾ, ಮತ್ತು ಮಾಜಿ ಪ್ರಾಚಾರ್ಯರು. ಬಿಶಪ್ ಕಾಟನ್, ಮಹಿಳಾ ಕ್ರೈಸ್ತ ಕಾಲೇಜು ಬೆಂಗಳೂರು. ಬಾಂಗ್ಲಾದೇಶದ ಬ್ರಿಟಿಷ್ ಸಂಜಾತೆ, ಫಿಸಿಯೊಥೆರಪಿಸ್ಟ್ ಮತ್ತು ಮಾನವತಾವಾದಿ, ಸೆಂಟರ್ ಫಾರ್ ರಿಹ್ಯಾಬಿಲಿಟೇಶನ್ ಆಫ್ ದ ಪ್ರಯಾರಲೆಸ್ಡ್ (ಸಿಆರ್‌ಪಿ), ಬಾಂಗ್ಲಾದೇಶ ಇದರ ಸಂಸ್ಥಾಪಕ ನಿರ್ದೇಶಕಿ ಶ್ರೀಮತಿ ವ್ಯಾಲೆರಿ ಟೇಲರ್ ಅವರು ಉಪಸ್ಥಿತರಿರುತ್ತಾರೆ. ಇವರಿಗೆ ಆರ್ಡರ್ ಆಫ್ ದ ಬ್ರಿಟಿಶ್ ಎಂಪೈರ್, ಬಾಂಗ್ಲಾದೇಶದ ಅತ್ಯುನ್ನತ ಪ್ರಶಸ್ತಿಯಾದ "ಶದಿನೋತ ದಿಬೋಶ್ ಪೊರೊಕ್" ಸೇರಿದಂತೆ ಹಲವು ಪ್ರಶಸ್ತಿಗಳು ಸಂದಿವೆ. ಶ್ರೀ ರಾಜೇಶ್ ತಿವಾರಿ, ಉಪನಿರ್ದೇಶಕರು, ಸಮಾಜಕಲ್ಯಾಣ ಇಲಾಖೆ, ಛತ್ತೀಸ್‌ಗಢ ಸರ್ಕಾರ.

ಮೊಬಿಲಿಟಿ ಇಂಡಿಯಾದ ನಿರ್ದೇಶಕಿಯಾದ ಶ್ರೀಮತಿ ಅಲ್ಬಿನಾ ಶಂಕರ್ ಅವರು ಹೀಗೆ ಹೇಳುತ್ತಾರೆ, "20 ವರ್ಷಗಳಿಂದ ಸೇವೆಯನ್ನೊದಗಿಸಿ, 12 ವರ್ಷಗಳ ಕಾಲ 25 ದೇಶಗಳ ಹಲವಾರು ವಿದ್ಯಾರ್ಥಿಗಳಿಗೆ ತರಬೇತಿ ನೀಡಿ ಆದಮೇಲೆ ಎಂಐ ಇಂಥ ಬೃಹತ್ ಕಾರ್ಯಕ್ರಮ ಆಯೋಜಿಸುವತ್ತ ಹೆಜ್ಜೆ ಇಡುತ್ತಿರುವುದು ನ್ಯಾಯವಾದದ್ದೇ. 2014ನೇ ಇಸವಿಗೆ ಎಂಐ ಅಸ್ತಿತ್ವಕ್ಕೆ ಬಂದು 20 ವರ್ಷಗಳಾಗಿವೆ. ಬದಲಾಗುತ್ತಿರುವ ಈ ಪ್ರಪಂಚದಲ್ಲಿ ಮುಂದುವರಿಯುತ್ತಿರುವ ಪುನರ್ವಸತಿ ಚಿಕಿತ್ಸೆ ಪದ್ಧತಿಗಳು,

ವಿಧಾನ ಹಾಗೂ ತಂತ್ರಜ್ಞಾನಗಳ ಜೊತೆಜೊತೆಗೆ ನಾವೂ ಮುಂದಕ್ಕೆ ಹೆಜ್ಜೆ ಇಡುವುದು ಅನಿವಾರ್ಯವಾಗಿತ್ತು. ಇಂಥ ಒಂದು ಸಮ್ಮೇಳನವು ಈ ಎಲ್ಲ ಕೆಲಸಗಳಿಗೆ ಒಂದು ವೇದಿಕೆಯನ್ನೊದಗಿಸಿ ಸಮಗ್ರ ಹಾಗೂ ಸಶಕ್ತ ಭವಿಷ್ಯದೆಡೆಗೆ ಪಥನಿರ್ಮಾಣ ಮಾಡಿಕೊಡುತ್ತದೆ.”